ನಿಯಮ ೩೩೪ರ ಮೇರೆಗೆ

೧. ಕುಣಿಗಲ್ ತಾಲ್ಲೂಕಿನ ೨೨೪ ಗ್ರಾಮಗಳಿಗೂ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.

ಶ್ರೀ ಎನ್. ಹುಚ್ಚವಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಬ್ಸೆರೊಳಗೆ ಎಲ್ಲಾ ಗ್ರಾಮಗಳಿಗೂ ಕೊಳವೆ ಬಾವಿಗಳನ್ನು ತೆಗೆಸಿ, ನೀರು ಕೊಡತಕ್ಕ ವಾಗ್ದಾನವನ್ನು ಸರ್ಕಾರದವರು ಮಾಡಿದ್ದರು. ಕೆಲವು ಊರುಗಳಿಗೆ ನೀರು ಕೊಟ್ಟಿದ್ದಾರೆ ಈ ಕಾರ್ಯ ಎಷ್ಟು ಬೇಗ ಪ್ರಾರಂಭವಾಗಬೇಕಾಗಿತ್ತೋ, ಅಷ್ಟು ಬೇಗ ಪ್ರಾರಂಭವಾಗಿಲ್ಲ. ಕುಣಿಗಲ್ ತಾಲ್ಲೂಕಿನಲ್ಲಿ ಹರಿಜನ ಕಾಲೋನಿಗಳು, ಜನತಾ ಕಾಲೋನಿಗಳು ಸೇರಿ ೨೨೪ ಕಡೆ ಕೊಳವೆ ಬಾವಿಗಳನ್ನು ತೆಗೆಸಿ ತುರ್ತ್ತಾಗಿ ಕುಡಿಯುವ ನೀರು ಕೊಡ ಬೇಕಾಗಿದೆ. ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಅನೇಕ ಸಲ ಈ ವಿಷಯ ತಿಳಿಸಿದ್ದೇನೆ. ಅವರು ಬೇಗ ರಿಗ್‌ಯಂತ್ರ ಕಳುಹಿಸಿ, ಮಾಡಿಸಿಕೊಡುತ್ತೇವೆಂದು ಹೇಳಿದ್ದರು ಇನ್ನೂ ಕಾರ್ಯ ಪ್ರಾರಂಭ ಮಾಡಿಲ್ಲ, ಸರ್ಕಾರದವರು ಆದಷ್ಟು ಬೇಗ ೨೨೪ ಗ್ರಾಮಗಳಿಗೂ ಕೊಳವೆ ಬಾವಿಗಳನ್ನು ತೆಗೆಸಿ ನೀರು ಒದಗಿಸುವ ಪ್ರಯತ್ನ ಮಾಡಬೇಕು. ಕೆಲವು ಗ್ರಾಮಗಳಲ್ಲಿ ಕೊಳವೆ ಬಾವಿಗಳಿಗೆ ಹೊಡಿಸಿರುವ ಕೈಪಂಪುಗಳು ಕೆಟ್ಟು ಹೋಗಿವೆ, ಅವುಗಳನ್ನು ಕೂಡ ಆದಷ್ಟು ಬೇಗ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸ್ವಾಮಿ, ಮಾನ್ಯ ನಜೀರ್ ಸಾಹೇಬರಿಗೆ ವಿಷಯ ನೆನಪು ಮಾಡಿ, ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಅಗ್ರಹ ಪೂರ್ವಕವಾಗಿ ಹೇಳುತ್ತೇನೆ.

೨. ಬಾದಾಮಿ ತಾಲ್ಲೂಕ್ ನೇರಲೇಕೆರೆ ಹಾಗೂ ಅದರ ಸಂತ್ಪಮುತ್ತಲಿನ ಹಳ್ಳಿಗಳಲ್ಲಿ ಏತ ನೀರಾವರಿಗೆ ಅನುಕೂಲ ಮಾಡಿಕೊಡುವುದರ ಬಗ್ಗೆ.

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಸನ್ಮಾನ್ಯ ಅಧ್ಯಕ್ಷರೇ, ಬಾದಾಮಿ ತಾಲ್ಲೂಕು ನೇರಲೇಕೆರೆ ಹಾಗೂ ಅದರ ಸುತ್ತಮುತ್ತ ೧೨–೧೫ ಹಳ್ಳಿಗಳ ರೈತರು ಕಳೆದ ೧೨ ದಿವಸಗಳಿಂದಲೂ ಆಮರಣಾಂತರ ಉಪವಾಸವನ್ನು ಕೈಗೊಂಡಿದ್ದಾರೆ. ಈ ಭಾಗದಲ್ಲಿ ಏತ ನೀರಾವರಿ ಆದಷ್ಟು ಶೀಘ್ರವಾಗಿ ಕಾರ್ಯಗತ ಮಾಡಬೇಕೆಂಬುದರ ಅವರ ಪ್ರಮುಖ ಬೇಡಿಕೆಯಾಗಿದೆ. ಕಳೆದ ೭–೮ ವರ್ಷಗಳಿಂದಲೂ ಸರ್ಕಾರಕ್ಕೆ ಮನವಿ ಸಲ್ಲಿಸುವುದರ ಮೂಲಕ ಚಳುವಳಿ ಮಾಡುವುದರ ಮೂಲಕ ತಮ್ಮ ಬೇಡಿಕೆಯನ್ನು ಮುಂದಿಡುತ್ತಲೇ ಬಂದಿದ್ದಾರೆ.

ಆದರೆ ಇದುವರೆಗೂ ಯಾವುದೇ ರೀತಿಯಾದ ಪರಿಹಾರ ಸಿಕ್ಕದೇ ಇರುವುದರಿಂದ ಸುಮಾರು ೧೫ ಹಳ್ಳಿಗಳ ರೈತರು ಪಕ್ಷಾತೀತವಾಗಿ ಎಲ್ಲರೂ ಸೇರಿಕೊಂಡು ಸತ್ಯಾಗ್ರಹ ಉಪವಾಸ ವ್ರತ ಮಾಡಬೇಕು ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಆದರಲ್ಲಿ ಕಾಂಗ್ರೆಸ ನವರು, ಬಿ.ಜೆ.ಪಿ.ಯವರು ಜನತಾ ಪಕ್ಷದವರೂ ಎಲ್ಲರೂ ಸೇರಿದ್ದಾರೆ. ಮತ್ತೆ ಈಗ ಅವರು ಆಮರಣಾಂತ ಉಪವಾಸ ವ್ರತ ಮಾಡತಕ್ಕ ಮಟ್ಟಕ್ಕೆ ಹೋಗಿರುವುದರಿಂದ ಆ ರೀತಿಯಾಗಿ ಮಾಡಬೇಡಿ ಎಂದು ವಿನಂತಿಸಿಕೊಂಡಿದ್ದರೂ ಸಹ ಅವರು ಆ ಒಂದು ಸ್ಟೆಪ್‌ನ್ನು ತೆಗೆದುಕೊಂಡಿದ್ದಾರೆ ಮತ್ತು ಇದನ್ನು ಸರ್ಕಾರಕ್ಕೂ ಸಹ ತಿಳಿಸಿದ್ದಾರೆ. ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ಬರಗಾಲದ ಬವಣೆಗೆ ಮತ್ತು ಆಗಿರತಕ್ಕ ಜನತೆಗೆ ಶಾಶ್ವತವಾದ ಪರಿಹಾರವನ್ನು ಒದಗಿಸುವ ದೃಷ್ಟಿಯಿಂದ ನೇರಳಕೆರೆ ಲಿಫ್ಟ್ ಇರಿಗೇಷನ್ ಏನಿದೆ ಅದನ್ನು ತೆಗೆದುಕೊಳ್ಳ ಬಹುದೆಂದು ಬಾಲಕುಂದರ್ಗಿಯವರು ಸಹ ರೆಕಮೆಂಡ್ ಮಾಡಿದ್ದಾರೆ ಮತ್ತು ಆಡಳಿತಾತ್ಮಕವಾಗಿ ಸಹ ಇದಕ್ಕೆ ಒಪ್ಪಿಗೆ ಸಿಕ್ಕಿದೆ. ಆದುದರಿಂದ ಇದನ್ನು ಮಾಡಲು ಯಾವುದೇ ಅಭ್ಯಂತರವಿರುವುದಿಲ್ಲ ಅದುದ್ದಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಬರೀ ಪರಿಶೀಲನೆ ಮಾಡುತ್ತೇನೆ ಎಂದು ಹೇಳದೆ ಈ ಕೆಲಸವನ್ನು ಮಾಡಿಕೊಡುತ್ತೇನೆಂದು ಹೇಳತಕ್ಕ ಮಾತನ್ನು ಹೇಳುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸಂಬಂಧಪಟ್ಟ ಮಂತ್ರಿಗಳವರಿಗೆ ಮಾನ್ಯ ಚಿಮ್ಮನಕಟ್ಟಿಯವರು ಈಗ ಏನು ಕಳಕಳಿಯಿಂದ ಹೇಳಿದರು ಅದಕ್ಕಿಂತಲೂ ಚೆನ್ನಾಗಿ ಮಂತ್ರಿಗಳವರ ಮನಮುಟ್ಟುವಂತೆ ಹೃದಯ ಮುಟ್ಟುವಂತೆ ಹೇಳಿ ಅರ್ಥ